ನದಿ ಹರಿವಿನ ಪಕ್ಕದಲ್ಲಿರುವ ಈ ಯುನೆಸ್ಕೋ ವಿಶ್ವಪಾರಂಪರಿಕ ಸ್ಮಾರಕದ ಸಮೀಪ, 42 ಇಂಚು ಎತ್ತರದ ಗಾಂಧೀಜಿ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಲಾಗಿದೆ.

### ಜಾಗತಿಕ ಇತಿಹಾಸ ಬದಲಿಸಿದ ಸೆಕೆಂಡ್‌ನ 1/10,000 ಅವಧಿ

‘ಅಮೆರಿಕದ ಟಿನಿಯನ್ ಸಮಯ, ಬೆಳಗ್ಗೆ 7.41ಕ್ಕೆ ವಿಮಾನಗಳು ಎತ್ತರಕ್ಕೇರುತ್ತಿದ್ದವು. ಹಿರೋಷಿಮಾ ಮೇಲೆ ಮುಸುಕಿದ್ದ ಮಂಜಿನ ತೆರೆ ಸರಿದಿತ್ತು. 8.38ಕ್ಕೆ ವಿಮಾನ 32,700 ಅಡಿ ಎತ್ತರದಲ್ಲಿತ್ತು. 8.47ಕ್ಕೆ ಎಲೆಕ್ಟ್ರಾನಿಕ್ ಫ್ಯೂಸ್‌ಗಳನ್ನು ಪರೀಕ್ಷಿಸಿ, ಸಮರ್ಪಕವಾಗಿದೆಯೆಂದು ದೃಢಪಡಿಸಿಕೊಂಡರು. 9.09ಕ್ಕೆ ಟಾರ್ಗೆಟ್ ಹಿರೋಷಿಮಾ ಸ್ಪಷ್ಟವಾಗಿ ಕಾಣಿಸುತ್ತಿತ್ತು. 9.15ಕ್ಕೆ ಸರಿಯಾಗಿ ಹಿರೋಷಿಮಾ ಮೇಲೆ ಬಾಂಬ್ ಬೀಳಿಸಲಾಯಿತು’. ಬಿ–29 ವೈಮಾನಿಕ ದಳದ ಕ್ಯಾಪ್ಟನ್ ವಿಲಿಯಂ ಎಸ್. ಪಾರ್ಸನ್ ಡೈರಿಯ ಪುಟದಲ್ಲಿನ ದಾಖಲೆಯಿದು.

‘ಲಿಟಲ್ ಬಾಯ್’ ಎಂದು ಹೆಸರಿಸಿದ್ದ ಬಾಂಬ್, 120 ಇಂಚು ಉದ್ದ ಮತ್ತು 28 ಇಂಚು ಸುತ್ತಳತೆ ಹಾಗೂ 9000 ಪೌಂಡ್ ತೂಕವಿತ್ತು. ವಿಮಾನದಿಂದ ಬಾಂಬ್ ಬೀಳಿಸಿದ 43 ಸೆಕೆಂಡುಗಳ ನಂತರ ಅದು ದೊಡ್ಡದಾಗಿ ಆಸ್ಫೋಟಿಸಿತು. 50,000,000 ಡಿಗ್ರಿ ಸೆಂಟಿಗ್ರೇಡ್ ಶಾಖ ಹೊರಹೊಮ್ಮಿತು. ಆಸ್ಫೋಟದ ನಂತರ ಸೆಕೆಂಡ್‌ನ 1/10,000 ಅವಧಿಯಲ್ಲಿ 180 ಅಡಿ ವ್ಯಾಸದ ಬೆಂಕಿಯ ಚೆಂಡು ಸೃಷ್ಟಿಯಾಯಿತು. ಅದರ ಅಂತರ್ಯದಲ್ಲಿದ್ದುದು 300,000 ಡಿಗ್ರಿ ಸೆಂಟಿಗ್ರೇಡ್ ಶಾಖ. ಸೆಕೆಂಡಿಗೆ 2.8 ಮೈಲು ವೇಗದಲ್ಲಿ ಶಾಖದ ತರಂಗಗಳು ನಗರವನ್ನು ಎಲ್ಲಾ ದಿಕ್ಕುಗಳಿಂದಲೂ ಅಪ್ಪಳಿಸಿದವು. ಅದರ ವಿನಾಶದ ಶಕ್ತಿಯನ್ನು 20,000 ಟನ್ ಟಿ.ಎನ್.ಟಿ.ಗೆ ಹೋಲಿಕೆ ಮಾಡಬಹುದಿತ್ತು. ಸುಮಾರು ಇಪ್ಪತ್ತು ಟ್ರಿಲಿಯನ್ ಕ್ಯಾಲರಿ ಶಕ್ತಿ ಬಿಡುಗಡೆಯಾಗಿತ್ತು.

ಅಂದು ಆಗಸ್ಟ್ 6, 1945.

ಬಾಂಬ್ ಬಿದ್ದ ಎರಡೇ ನಿಮಿಷದ ಕಾಲಾವಧಿಯಲ್ಲಿ ಹಿರೋಷಿಮಾ ನಾಮಾವಶೇಷವಾಯಿತು. ಅಲ್ಲಿ ಆ ಕ್ಷಣದಲ್ಲಿ ಏನೂ ಇರಲಿಲ್ಲ! ಭೂಮಿ ಮತ್ತು ಆಕಾಶ ಸಹ!

**ಶಾಂತಿಗಾಗಿ ಪ್ರಾರ್ಥನೆ:** ಮಗುವನ್ನು ಎತ್ತಿಕೊಂಡ ತಾಯಿಯ ಮುಂದೆ ಅರ್ಧಚಂದ್ರವಿರುವ ಮೂರ್ತಿಯನ್ನು 1977ರಲ್ಲಿ ಸ್ಥಾಪಿಸಲಾಗಿದೆ. ಅರ್ಧ ಚಂದ್ರನಿಂದ ಪೂರ್ಣ ಚಂದ್ರನೆಡೆಗೆ ಶಾಂತಿಯ ಭರವಸೆಯನ್ನು ಈ ಮೂರ್ತಿ ಪ್ರತಿನಿಧಿಸುತ್ತದೆ.



### ಶಾಂತಿ ಸ್ಮಾರಕ ಉದ್ಯಾನ

ಅಣುಬಾಂಬ್ ಗುಮ್ಮಟದ ಪಕ್ಕದಲ್ಲಿ ಹರಿಯುತ್ತಿರುವ ಹಿರೋಷಿಮಾ ನಗರದ ಜೀವದಾಯಿನಿ ನದಿ ಮೊಟೊಯಸು ಬಾಂಬ್ ದಾಳಿಗೆ ತುತ್ತಾದವರ ಆಕ್ರಂದನ, ನಿಟ್ಟುಸಿರು, ನೋವು, ಕಂಬನಿ, ರಕ್ತ, ಸಾವುಗಳಿಗೆ ಸಾಕ್ಷಿಯಾಗಿದೆ. ನದಿಯ ಆಚೆ ದಡದಲ್ಲಿದೆ 1.2 ಲಕ್ಷ ಚ.ಮೀ. ವಿಸ್ತೀರ್ಣದಲ್ಲಿ ಹರಡಿರುವ ಹಿರೋಷಿಮಾ ಶಾಂತಿ ಸ್ಮಾರಕ ಉದ್ಯಾನ. 1955ರಲ್ಲಿ ನಿರ್ಮಾಣವಾದ ಈ ಉದ್ಯಾನವನ್ನು ವಿಶ್ವ ಪಾರಂಪರಿಕ ಸ್ಮಾರಕವೆಂದು ಘೋಷಿಸಲಾಗಿದೆ. ಇಲ್ಲಿರುವ ಸ್ಮಾರಕಗಳು, ಮ್ಯೂಸಿಯಂ ಹಾಗೂ ಬೋಧನಾ ಕೇಂದ್ರಗಳು ಜಗತ್ತಿನೆಲ್ಲೆಡೆಯಿಂದ ಬರುವ ಪ್ರವಾಸಿಗರಿಗೆ ಅಣುಬಾಂಬ್ ದಾಳಿಯ ಕರಾಳತೆಯನ್ನು, ಸುಟ್ಟು ಬೂದಿಯಾದರೂ ಚಿಗುರೊಡೆದು ಬೆಳೆದ ಹಿರೋಷಿಮಾದ ಕಥೆಯನ್ನು ವಿವರಿಸುತ್ತವೆ.

ಪ್ರತಿವರ್ಷ ಆಗಸ್ಟ್ 6ರಂದು, ಹಿರೋಷಿಮಾದಲ್ಲಿ ಅಣುಬಾಂಬ್ ದಾಳಿಗೆ ತುತ್ತಾದ ಸುಮಾರು 1.6 ಲಕ್ಷ ದುರ್ದೈವಿಗಳನ್ನು ಸ್ಮರಿಸುತ್ತಾ ವಿಶ್ವಶಾಂತಿಗಾಗಿ ಈ ಉದ್ಯಾನದಲ್ಲಿ ‘ಶಾಂತಿ ಸಂಸ್ಮರಣಾ ದಿನಾಚರಣೆ’ ಆಚರಿಸಲಾಗುತ್ತದೆ. ಅಣುಬಾಂಬ್ ಬಿದ್ದ (ಜಪಾನಿನ) ಸಮಯ, ಬೆಳಗಿನ 8.15ಕ್ಕೆ ಸರಿಯಾಗಿ ಒಂದು ನಿಮಿಷ ಮೃತರ ಕುಟುಂಬದವರ ಪ್ರತಿನಿಧಿಗಳು ಬೃಹತ್ ಶಾಂತಿ ಗಂಟೆ ಬಾರಿಸುತ್ತಾರೆ. ಮೌನಾಚರಣೆ, ಶಾಂತಿ ಪ್ರತಿಜ್ಞಾವಿಧಿ ಹಾಗೂ ಶಾಂತಿಯ ಸಂಕೇತವಾಗಿ ಪಾರಿವಾಳಗಳನ್ನು ಹಾರಿಬಿಡುವ ಕಾರ್ಯಕ್ರಮಗಳಿರುತ್ತವೆ.

### ಕಾಗದದ ಹಕ್ಕಿಗಳು

ಉದ್ಯಾನದ ಒಂದು ಭಾಗದಲ್ಲಿ, ದುರಂತದಲ್ಲಿ ಮಡಿದ ಮಕ್ಕಳ ಸ್ಮರಣಾರ್ಥ ನಿರ್ಮಿಸಿರುವ ಮಕ್ಕಳ ಶಾಂತಿ ಸ್ಮಾರಕವಿದೆ. ಎತ್ತರದ ಗೋಪುರದ ಮೇಲೆ ಕೈಗಳೆರಡನ್ನೂ ಹೊರಚಾಚಿರುವ ಸಡೊಕೋ ಸಸಾಕಿ ಎಂಬ ಹುಡುಗಿಯ ಶಿಲಾಮೂರ್ತಿಯಿದೆ. ಆಕೆಯ ತಲೆ ಮೇಲೆ ಹಕ್ಕಿಯ ಕೆತ್ತನೆಯಿದೆ.



ಐಕೊ (9 ವರ್ಷ) ಮತ್ತು ಅವಳ ತಮ್ಮ ಟೊರು (7 ವರ್ಷ) ವಿಕಿರಣಕ್ಕೆ ತುತ್ತಾಗಿ ಬೋಳಾದರು. ನಾಲ್ಕು ವರ್ಷಗಳ ನಂತರ ಟೊರು ಮೃತಪಟ್ಟ. 20 ವರ್ಷಗಳು ಬದುಕಿದ್ದ ಐಕೊ ತನ್ನ 29ನೇ ವಯಸ್ಸಿನಲ್ಲಿ ಕ್ಯಾನ್ಸರ್‌ನಿಂದ ಮೃತಪಟ್ಟಳು.

ಅಣುಬಾಂಬ್ ವಿಕಿರಣದಿಂದ ಮೃತಪಟ್ಟ ಸಡೊಕೋ ಸಸಾಕಿ ಒಂದು ಸಾವಿರ ಪೇಪರ್ ಹಕ್ಕಿಗಳನ್ನು ಮಾಡಿದರೆ, ತನಗೆ ಬಂದ ಕ್ಯಾನ್ಸರ್‌ನಿಂದ ಗುಣಮುಖಳಾಗುವುದಾಗಿ ನಂಬಿದ್ದಳು. ಇಂದಿಗೂ ಅವಳ ನೆನಪಿನಲ್ಲಿ ಮಕ್ಕಳು ಶಾಂತಿ ಉದ್ಯಾನಕ್ಕೆ ಪೇಪರ್ ಹಕ್ಕಿಗಳನ್ನು ಕಳಿಸುತ್ತಾರೆ.

ಉದ್ಯಾನದಲ್ಲಿನ ಬೃಹತ್ ಶಾಂತಿ ಗಂಟೆಯನ್ನು ಪ್ರವಾಸಿಗರು ಶಾಂತಿಯ ಸಂಕೇತವಾಗಿ ಬಾರಿಸುತ್ತಾರೆ. ಗಂಟೆ ಮೇಲೆ ಗ್ರೀಕ್, ಜಪಾನಿ ಹಾಗೂ ಸಂಸ್ಕೃತ ಭಾಷೆಗಳಲ್ಲಿ ‘ನಿನ್ನನ್ನು ನೀನು ಅರಿತುಕೋ’ ಎನ್ನುವ ಘೋಷವಾಕ್ಯವಿದೆ.

### ಶಾಂತಿ ಸ್ಮಾರಕ ವಸ್ತುಸಂಗ್ರಹಾಲಯ

ಅಣುಬಾಂಬ್ ದಾಳಿಯ ಭೀಕರತೆಯ ಪ್ರದರ್ಶನ ಮತ್ತು ಆ ಮೂಲಕ ವಿಶ್ವಶಾಂತಿಯನ್ನು ಪ್ರತಿಪಾದಿಸಲೆಂದು 1955ರಲ್ಲಿ ಈ ಸಂಗ್ರಹಾಲಯ ಸ್ಥಾಪಿಸಿದರು. ದಾಳಿಯ ಮುಂಚಿನ ಹಾಗೂ ನಂತರದ ಹಿರೋಷಿಮಾ ಕುರಿತು ಸವಿವರವಾಗಿ ಚಿತ್ರಗಳು, ವಸ್ತುಗಳ ಮೂಲಕ ನೋಡುವಾಗ ಕರುಳು ಹಿಂಡಿದಂತಾಗುತ್ತದೆ. ದಾಳಿಯ ಸಮಯ 8.15ಕ್ಕೆ ತಟಸ್ಥವಾದ ಗಡಿಯಾರ ನಮ್ಮನ್ನು ಕಾಲದ ಹಾದಿಯಲ್ಲಿ ಕರೆದೊಯ್ದು ತಲ್ಲಣಗೊಳಿಸುತ್ತದೆ. ದಾಳಿಗೆ ತುತ್ತಾದವರ ಬಟ್ಟೆಗಳು, ಕರಕಲಾದ ದೇಹಗಳ ಚಿತ್ರಗಳು, ಬಳಸುತ್ತಿದ್ದ ವಸ್ತುಗಳು, ಪೆನ್ನು, ಪಾದರಕ್ಷೆ, ಗಡಿಯಾರ, ಸೈಕಲ್, ಸಮವಸ್ತ್ರ, ಬರಹ ಮುಂತಾದವುಗಳನ್ನು ನೋಡುತ್ತಾ ಕಣ್ಣು ತುಂಬಿಬರುತ್ತದೆ.

ಅಣುಬಾಂಬ್ ಮುಕ್ತ ಭೂಮಿಯನ್ನು ಕಾಣುವಂತಾಗಲೆಂಬ ಆಶಯದೊಂದಿಗೆ ನಿರಂತರವಾಗಿ ಉರಿಯುತ್ತಿರುವ ಶಾಂತಿಜ್ಯೋತಿ, ಅಣುಶಸ್ತ್ರಾಸ್ತ್ರ ಮುಕ್ತ ವಿಶ್ವಶಾಂತಿಗಾಗಿ ಜಪಾನ್ ನಡೆಸುತ್ತಿರುವ ಆಂದೋಲನದ ಪ್ರತೀಕವಾಗಿದೆ. ಈ ಮನುಕುಲದ ದುರಂತದಿಂದ ಪಾಠ ಕಲಿಯದಿದ್ದರೆ ಮನುಷ್ಯತ್ವ ಎಂಬ ಪದವೇ ಅರ್ಥಹೀನ.

ಪ್ರತಿಕ್ರಿಯಿಸಿ: feedback@sudha.co.in